# Senior Chamber International
*(Responsible and active citizenship)*
## Bi Monthly Reporting Format 2025-26

| | | | | | | | |
|---|---|---|---|---|---|---|---|
| NAME OF THE LEGION | SCI NELLYADY LEGION | | SPONSORED BY | SCI MANGALORE LEGION | | | |
| DATE OF CHARTER | 25-07-2019 | NVP AREA | SNR PPF SIDDAGANGAIAH S F | | | 2024-25 2nd HALF DUES | 22 |

| INSTALLATION HELD ON | | MANAGEMENT COMMITTEE MEETING | | GENERAL BODY MEETING | |
|---|---|---|---|---|---|
| DATE | No. OF MEMBERS PRESENT | DATE | No. OF MEMBERS PRESENT | DATE | No.OF MEMBERS PRESENT |
| 25-07-2025 | 60 | 10-10-2025<br>13-11-2025 | 13<br>14 | 24-10-2025<br>20-11-2025 | 18<br>15 |

**DUES**

| 2025-26 1st HALF | NUMBER | 22 | SENT ON | 25-07-2025 | 2025-26 2nd HALF | NUMBER | 24+1 = 25 | SENT ON | 25-10-2025<br>31-10-2025 |
|---|---|---|---|---|---|---|---|---|---|

| | |
|---|---|
| EXTENSION PLANNED (Mention proposed area) | |
| EXTENSION DONE | |
| ACTIVE SENIORETTE WING | YES NO √ — IF YES HOW MANY MEMBERS |
| PROGRAM/PROJECTS CONDUCTED (Attach separate sheet with action photos) | |
| No. OF Vision 360- Impacting Lives Program Conducted with Details | |

| NP VISIT ORGANISED | | NVP VISIT ORGANISED | | HOSTED ANY NATIONAL EVENTS |
|---|---|---|---|---|
| DATE | 25-07-2025 | DATE | 25-07-2025 | NAME OF THE EVENT<br>DATE |
| MEMBERS | 60 | MEMBERS | 60 | LEGIONS<br>MEMBERS |

**PARTICIPATION IN NATIONAL EVENTS**

| | PST LEADERSHIP ACADEMY | SCI TRAINER WORKSHOP | CUL & BUSINESS EXPO | YOUTH CONFERENCE | REGIONAL CONCOURSE | SENIORETTEE CONCOURSE | NATIONAL CONCOURSE |
|---|---|---|---|---|---|---|---|
| MEMBERS | 2 | 1 | | | 15 Reg . | | |

| | |
|---|---|
| FINANCIAL CONTRIBUTION TO SCI | |
| ANY LEGION BULLETIN, if yes name & frequency | |
| ANY OTHER INFORMATION | |

| NAME & SIGNATURE OF President/Secretary | | DATE |
|---|---|---|
| (signature) SNR PPF PRAKASH K Y PRESIDENT | (signature) SNR PPF ULAHANNAN PM SECRETARY | 09-12-2025 |

| | |
|---|---|
| SENT ORIGNAL TO | NATIONAL SECRETARIAT: SENIOR CHAMBER INTERNATIONAL, #GF20, VYAPARABHAVAN,BANK ROAD, CALICUT, KERALA – 673 001 |
| COPY TO ASSIGNED NVP | F: Snr PPF Siddagangaiah S<br>A.Snr PPF Anoop Keloth, B. Snr PPF Benny M J ,C.Snr PPF Boban t theckel<br>D.Snr Geethalatha A, E. Snr PPF Hamsa S Ali,<br>G: Snr PPF Surekha Muralidhar, H: Snr PPF Venugopal K P |
| ND MGT | SNR PPF DR M SHIVAKUMAR success.shivu.msk@gmail.com scins2122@gmail.com |

| POST BEFORE | 10 JUNE 2025 | 10 AUGUST 2025 | 10 OCTOBER 2025 | 10 DECEMBER 2025 | 10 FEBRUARY 2026 |
|---|---|---|---|---|---|

# Bi Monthly Reporting Format 2025-26

## October 2025 - November 2025

## Program/Projects Conducted [Attach Separate Sheet with action Photos]


| | |
|---|---|
| 02-10-2025 | 1. SCI NELLYADI LEGION Celebrated Gandhi Jayanthi at Bethany ITI Nellyady. Cleaning Done Refreshments Given to Children. |





| | |
|---|---|
| 10-10-2025 | 2. SCI NELLYADI LEGION Conducted monthly Management Committee meeting at IICT Nellyadi. |
| 14-10-2025 | 3. SCI NELLYADI LEGION Distributed Pamphlets of Eye Camp to Govt. Doctor, Gram panchayat President,Self help Groups |
| 16-10-2025 | 4. SCI NELLYADI LEGION collection Starteded for Chiguru Registration |




| | |
|---|---|
| 24-10-2025 | 5. SCI NELLYADI LEGION Conducted monthly GB meeting at IICT Nellyadi. |

| | |
|---|---|
| **26-10-2025** | 6. SCI NELLYADI LEGION 15 members registered for Regional Conference Area F 6 Members Attended. |







| | |
|---|---|
| **26-10-2025** | 7. SCI NELLYADI LEGION Got Top Ten Award |




✍️ನೇಸರ ನ್ಯೂಸ್

🌀ನೆಲ್ಯಾಡಿ ಸೀನಿಯರ್ ಚೇಂಬರ್‌ಗೆ "ಟಾಪ್ ಟೆನ್ ಲೀಜಿಯನ್" ಗೌರವ

🌀ಸಮುದಾಯ ಅಭಿವೃದ್ಧಿ, ಸಾರ್ವಜನಿಕ ಸಂಪರ್ಕ ಹಾಗೂ ತರಬೇತಿ ಚಟುವಟಿಕೆಗಳ ಮೆಚ್ಚುಗೆಗೆ ಪ್ರಶಸ್ತಿ

https://nesaranewsworld.com/archives/51157

| 28-10-2025 | 8. SCI NELLYADI LEGION Conducted Eye Camp |
|---|---|

Suddi Bidugade 29-10-2025 Page -5

ಸುದ್ದಿ ಬಿಡುಗಡೆ

# ನೆಲ್ಯಾಡಿ: ಉಚಿತ ನೇತ್ರ ಚಿಕಿತ್ಸಾ ಶಿಬಿರ, ಕನ್ನಡಕ ವಿತರಣೆ

ನೆಲ್ಯಾಡಿ: ಲಯನ್ಸ್ ಕ್ಲಬ್ ಆಲಂಕಾರು ದುರ್ಗಾಂಬಾ, ಸೀನಿಯರ್ ಜೇಸಿ ನೆಲ್ಯಾಡಿ ಲೀಜಿಯನ್ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ನೆಲ್ಯಾಡಿ ಇದರ ಆಶ್ರಯದಲ್ಲಿ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ ಮಂಗಳೂರು, ಜಿಲ್ಲಾ ವೆನ್ಲಾಕ್ ಆಸ್ಪತ್ರೆ ಮಂಗಳೂರು, ಸಂಚಾರಿ ನೇತ್ರ ಚಿಕಿತ್ಸಾ ಘಟಕ ಮಂಗಳೂರು ಇದರ ಸಹಯೋಗದೊಂದಿಗೆ ತಜ್ಞ ವೈದ್ಯರಿಂದ ಉಚಿತ ನೇತ್ರ ಚಿಕಿತ್ಸಾ ಹಾಗೂ ಉಚಿತ ಕನ್ನಡಕ ವಿತರಣೆ ಕಾರ್ಯಕ್ರಮ ಅ.28ರಂದು ನೆಲ್ಯಾಡಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆಯಿತು.

ನೆಲ್ಯಾಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಶಿಶಿರ ಅವರು ಶಿಬಿರ ಉದ್ಘಾಟಿಸಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಕಣ್ಣಿನ ಪೊರೆ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಇಂತಹ ಶಿಬಿರದಿಂದ ಪ್ರಯೋಜನ ಸಿಗಲಿ ಎಂದರು. ಸಂಚಾರಿ ನೇತ್ರ ಚಿಕಿತ್ಸಾ ಘಟಕದ ಮುಖ್ಯಸ್ಥರಾದ ಸುಮನ ಅವರು ಉಚಿತ ಪೊರೆ ಶಸ್ತ್ರಚಿಕಿತ್ಸೆ, ಜಿಲ್ಲಾಸ್ಪತ್ರೆಯಿಂದ ಉಚಿತ ಕನ್ನಡಕ ವಿತರಣೆ ಕುರಿತು ಮಾಹಿತಿ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಲಯನ್ಸ್ ಕ್ಲಬ್ ಆಲಂಕಾರು ದುರ್ಗಾಂಬಾ ಇದರ ಅಧ್ಯಕ್ಷರಾದ ಪದ್ಮಪ ಗೌಡ ಮಾತನಾಡಿ, ಸಾಮಾಜಿಕ ಸೇವಾ ಸಂಸ್ಥೆಗಳು ಸೇವೆಯನ್ನೇ ಗುರಿಯಾಗಿಟ್ಟುಕೊಂಡು ಜನಪರ ಕಾಳಜಿಯಿಂದ ಇಂತಹ ಶಿಬಿರ ಆಯೋಜಿಸಿದಲ್ಲಿ ಸಂಸ್ಥೆಗಳ ಗೌರವ ಹೆಚ್ಚಾಗುತ್ತದೆ ಹಾಗೂ ಜನರಲ್ಲಿ ನಂಬಿಕೆ ಉಳಿಯುತ್ತದೆ. ಈ ನಿಟ್ಟಿನಲ್ಲಿ ಆಲಂಕಾರು ದುರ್ಗಾಂಬಾ ಲಯನ್ಸ್ ಕ್ಲಬ್ ಕೆಲಸ ಮಾಡುತ್ತಿದೆ ಎಂದರು. ಸೀನಿಯರ್ ಚೇಂಬರ್ ನೆಲ್ಯಾಡಿ ಲೀಜಿಯನ್ ಅಧ್ಯಕ್ಷ ಪ್ರಕಾಶ್ ಕೆ.ವೈ., ನೆಲ್ಯಾಡಿ ಗ್ರಾ.ಪಂ. ಅಧ್ಯಕ್ಷ ಸಲಾಂ ಬಿಲಾಲ್, ಸದಸ್ಯೆ ಉಷಾ ಜೋಯಿ, ಪುತ್ತೂರು ತಾಲೂಕು ಬಂಟರ ಸಂಘದ ಪ್ರಧಾನ ಕಾರ್ಯದರ್ಶಿ ನಿತ್ಯಾನಂದ ಶೆಟ್ಟಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೇಲ್ವಿಚಾರಕ ಆನಂದ ಡಿ.ಬಿ. ಸಂದರ್ಭೋಚಿತವಾಗಿ ಮಾತನಾಡಿದರು. ಪುತ್ತೂರು ತಾಲೂಕು ವೈದ್ಯಾಧಿಕಾರಿ ಡಾ. ದೀಪಕ್ ರೈ, ಉಪ್ಪಿನಂಗಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಕೃಷ್ಣಾನಂದರವರು ಶಿಬಿರಕ್ಕೆ ಭೇಟಿ ನೀಡಿದರು.

59ನೇ ನೇತ್ರ ಚಿಕಿತ್ಸಾ ಶಿಬಿರ ಸಂಘಟಕ, ದ.ಕ.ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಮಾಜ ಸೇವಕ ಗಂಗಾಧರ ಶೆಟ್ಟಿ ಹೊಸಮನೆ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಸಾಮಾಜಿಕ ಮುಖಂಡ ವಾಸುದೇವ ಗೌಡ ವಂದಿಸಿದರು. ನೆಲ್ಯಾಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಶಿಬಿರದ ಯಶಸ್ಸಿಗೆ ಸಹಕರಿಸಿದರು.




## 225 ಜನರಿಂದ ಕಣ್ಣಿನ ತಪಾಸಣೆ

ಶಿಬಿರದಲ್ಲಿ ಸುಮಾರು 225ಕ್ಕೂ ಹೆಚ್ಚು ಜನರು ಕಣ್ಣಿನ ತಪಾಸಣೆ ಮಾಡಿಸಿಕೊಂಡರು. 182 ಜನರಿಗೆ ಉಚಿತ ಕನ್ನಡ ವಿತರಿಸಲಾಯಿತು. 10 ಮಂದಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಆಯ್ಕೆಯಾದರು.

VK ವಿಜಯ ಕರ್ನಾಟಕ e-paper

# ನೆಲ್ಯಾಡಿಯಲ್ಲಿ ನೇತ್ರ ಚಿಕಿತ್ಸೆ ಶಿಬಿರ: 182 ಮಂದಿಗೆ ಉಚಿತ ಕನ್ನಡಕ ವಿತರಣೆ

■ ವಿಕ ಸುದ್ದಿಲೋಕ ನೆಲ್ಯಾಡಿ

ಲಯನ್ಸ್ ಕ್ಲಬ್ ಆಲಂಕಾರು ದುರ್ಗಾಂಬಾ, ಸೀನಿಯರ್ ಚೇಂಬರ್ ಇಂಟರ್ ನ್ಯಾಷನಲ್ ನೆಲ್ಯಾಡಿ ಲೀಜಿಯನ್ ಆಶ್ರಯದಲ್ಲಿ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ, ಜಿಲ್ಲಾ ವೆನ್ಲಾಕ್ ಆಸ್ಪತ್ರೆ, ಸಂಚಾರಿ ನೇತ್ರ ಚಿಕಿತ್ಸಾ ಘಟಕ ಸಹಯೋಗದೊಂದಿಗೆ ನೆಲ್ಯಾಡಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಂಗಳವಾರ ನೇತ್ರ ಚಿಕಿತ್ಸಾ ಹಾಗೂ ಶಸ್ತ್ರಚಿಕಿತ್ಸೆ ಉಚಿತ ಶಿಬಿರ ನಡೆಯಿತು.

ನೆಲ್ಯಾಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಶಿಶಿರ ಉದ್ಘಾಟಿಸಿ ಮಾತನಾಡಿ, ಗ್ರಾಮೀಣ ಜನರ ಕಣ್ಣಿನ ಆರೋಗ್ಯದ ರಕ್ಷಣೆಗೆ ನಮ್ಮ ಕೇಂದ್ರ ಸದಾ ಸಿದ್ಧವಾಗಿದೆ. ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ವೆನ್ ಲಾಕ್, ಕೆಎಂಸಿಯ ಸಹಯೋಗದೊಂದಿಗೆ ತಜ್ಞ ವೈದ್ಯರಿಂದ ನಡೆಸಲಾಗುತ್ತದೆ. ಉಚಿತ ಕನ್ನಡಕ ವಿತರಣೆ ಸೇರಿದಂತೆ, ಕಣ್ಣಿನ ಪೊರೆಶಸ್ತ್ರ ಚಿಕಿತ್ಸೆ, ಲೆನ್ಸ್ ಅಳವಡಿಕೆ ಮುಂತಾದ ಸರಕಾರದ ಸೌಲಭ್ಯಗಳು ಈ ಪ್ರದೇಶದ ಜನರಿಗೆ ತಲುಪಲು ನಮ್ಮ ಪ್ರಯತ್ನ ನಿರಂತರವಾಗಿರುತ್ತದೆ ಎಂದರು.

ಸಂಚಾರಿ ನೇತ್ರ ಚಿಕಿತ್ಸಾ ಘಟಕದ ಮುಖ್ಯಸ್ಥೆ ಸುಮನ ಮಾಹಿತಿ ನೀಡಿ, ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗಾಗಿ ಯಾವುದೇ ಆತಂಕವಿಲ್ಲದೆ ಧೈರ್ಯದಿಂದ ಮುಂದೆ ಬರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಲಯನ್ಸ್ ಕ್ಲಬ್ ಆಲಂಕಾರು ದುರ್ಗಾಂಬಾ ಅಧ್ಯಕ್ಷ ಪದ್ಮ ಗೌಡ ಮಾತನಾಡಿ, ಸಾಮಾಜಿಕ ಸೇವಾ ಸಂಸ್ಥೆಗಳು ಸೇವೆಯನ್ನೇ ಗುರಿಯಾಗಿಟ್ಟುಕೊಂಡು ಜನಪರ ಕಾಳಜಿಯಿಂದ ಇಂತಹ ಶಿಬಿರಗಳನ್ನು ನಡೆಸಿದರೆ ಸಂಸ್ಥೆಗಳ ಗೌರವ ಹೆಚ್ಚಾಗುತ್ತದೆ. ಜನರಲ್ಲಿ ನಂಬಿಕೆ ಉಳಿಯುತ್ತದೆ ಎಂದರು.

ಸೀನಿಯರ್ ಚೇಂಬರ್ ಇಂಟರ್ ನ್ಯಾಷನಲ್ ನೆಲ್ಯಾಡಿ ಲೀಜಿಯನ್ ಅಧ್ಯಕ್ಷ ಸೀನಿಯರ್ ಪಿಪಿಎಫ್ ಪ್ರಕಾಶ್ ಕೆ.ವೈ., ನೆಲ್ಯಾಡಿ ಗ್ರಾ.ಪಂ. ಅಧ್ಯಕ್ಷ ಸಲಾಂ ಬಿಲಾಲ್, ಸದಸ್ಯೆ ಉಷಾ ಜೋಯ್, ಬಂಟರ ಸಂಘ ಪುತ್ತೂರು ತಾಲೂಕು ಪ್ರಧಾನ ಕಾರ್ಯದರ್ಶಿ ನಿತ್ಯಾನಂದ ಶೆಟ್ಟಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೇಲ್ವಿಚಾರಕ ಆನಂದ ಡಿ.ಬಿ. ಶುಭಹಾರೈಸಿದರು.

ತಾಲೂಕು ವೈದ್ಯಾಧಿಕಾರಿ ದೀಪಕ್ ರೈ ಹಾಗೂ ಉಪ್ಪಿನಂಗಡಿ ಪಿಎಚ್‌ಸಿ ವೈದ್ಯಾಧಿಕಾರಿ ಡಾ.ಕೃಷ್ಣಾನಂದ ಶಿಬಿರಕ್ಕೆ ಭೇಟಿ ನೀಡಿದರು.

ಶಿಬಿರದಲ್ಲಿ ಸುಮಾರು 225ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದು, 182 ಮಂದಿಗೆ ಉಚಿತ ಕನ್ನಡಕ ವಿತರಿಸಲಾಯಿತು. ಸುಮಾರು 10 ಮಂದಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದಾರೆ.

ನೆಲ್ಯಾಡಿ ಪಿಎಚ್‌ಸಿ ಸಿಬ್ಬಂದಿ ಮತ್ತು ಆಶಾ ಕಾರ್ಯಕರ್ತೆಯರು ಶಿಬಿರದ ಯಶಸ್ಸಿಗೆ ಸಹಕರಿಸಿದರು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಮಾಜ ಸೇವಕ ಗಂಗಾಧರ ಶೆಟ್ಟಿ ಹೊಸಮನೆ ಸ್ವಾಗತಿಸಿದರು. ವಾಸುದೇವ ಗೌಡ ವಂದಿಸಿದರು.



ನೆಲ್ಯಾಡಿ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಶಿಶಿರ ಮಾತನಾಡಿದರು.

Main Edition
Oct 30, 2025 Page No. 4






| 01-11-2025 | 9. SCI NELLYADI LEGION Conducted Kannada Rajyothsava |
| --- | --- |












VK ವಿಜಯ ಕರ್ನಾಟಕ e-paper

## ನೆಲ್ಯಾಡಿ ಪಿಎಂಶ್ರೀ ಶಾಲೆಯಲ್ಲಿ ರಾಜ್ಯೋತ್ಸವ, ಪ್ರತಿಭಾ ಕಾರಂಜಿ

ಸೀನಿಯರ್ ಚೇಂಬರ್ ಇಂಟರ್‌ನ್ಯಾಷನಲ್ ನೆಲ್ಯಾಡಿ ಲೀಜಿಯನ್ ಅಧ್ಯಕ್ಷ ಪ್ರಕಾಶ್ ಕೆ.ವೈ. ಮಾತನಾಡಿದರು.

**ನೆಲ್ಯಾಡಿ:** ಕನ್ನಡ ರಾಜ್ಯೋತ್ಸವದ ಅಂಗವಾಗಿ ಪ್ರತಿಭಾ ಕಾರಂಜಿ ಸಮಾರೋಪ ಸಮಾರಂಭ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮ ನೆಲ್ಯಾಡಿಯ ಪಿಎಂಶ್ರೀ ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು.

ಸೀನಿಯರ್ ಚೇಂಬರ್ ಇಂಟರ್‌ನ್ಯಾಷನಲ್ ನೆಲ್ಯಾಡಿ ಲೀಜಿಯನ್ ಅಧ್ಯಕ್ಷ ಸೀನಿಯರ್ ಪ್ರಕಾಶ್ ಕೆ.ವೈ.ಮಾತನಾಡಿ, ಕನ್ನಡದ ಗೌರವವನ್ನು ಉಳಿಸುವುದು ಪ್ರತಿಯೊಬ್ಬ ವಿದ್ಯಾರ್ಥಿಯ ಕರ್ತವ್ಯವಾಗಿದೆ. ಪ್ರತಿಭಾ ಕಾರಂಜಿಯಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಸರ್ವಾಂಗೀಣ ವಿಕಸನಕ್ಕೆ ವೇದಿಕೆ ಒದಗಿಸುತ್ತವೆ ಎಂದು ಹೇಳಿದರು.

ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ದಿನಕರ್ ಕೆ.ಎಚ್., ಮುಖ್ಯ ಶಿಕ್ಷಕಿ ವೀಣಾ ಮಸ್ಕರೇನಸ್, ಸೀನಿಯರ್ ಚೇಂಬರ್ ನೆಲ್ಯಾಡಿ ಲೀಜಿಯನ್ ನಿಕಟ ಪೂರ್ವ ಅಧ್ಯಕ್ಷ ಶೀನಪ್ಪ ಎಸ್., ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ಕಡಬ ತಾಲೂಕು ಅಧ್ಯಕ್ಷ ವಿಮಲ್ ಕುಮಾರ್, ಜ್ಞಾನೋದಯ ಬೆಥನಿ ವಿದ್ಯಾಸಂಸ್ಥೆಯ ಮುಖ್ಯಶಿಕ್ಷಕ ಜಾರ್ಜ್ ಕೆ. ಥಾಮಸ್ ಉಪಸ್ಥಿತರಿದ್ದರು. ಶಿಕ್ಷಕಿಯರಾದ ಪ್ರವೀಣ ಸ್ವಾಗತಿಸಿ, ರತಿಲತಾ ವಂದಿಸಿದರು.

Main Edition
Nov 08, 2025 Page No. 2

| | |
|---|---|
| 13-11-2025 | 10.SCI NELLYADI LEGION Conducted monthly Managing Committee meeting at IICT Nellyadi. |
| 20-11-2025 | 11.SCI NELLYADI LEGION Snr Vishwanatha Shetty who got Kannada Rajyothsava Prashasthi |



| | |
|---|---|
| 20-11-2025 | 12.SCI NELLYADI LEGION Conducted monthly GB meeting at IICT Nellyadi. |
| 23-11-2025 | 13.SCI NELLYADI LEGION Conducted Dental Camp |

ವಿಜಯ ಕರ್ನಾಟಕ
e-paper

# ಸಂಪ್ಯಾಡಿ ಚರ್ಚ್‌ನಲ್ಲಿ ದಂತ ಚಿಕಿತ್ಸೆ ಶಿಬಿರ



ಶಿರಾಡಿ ಗ್ರಾಮ ಪಂಚಾಯಿತಿ ಸದಸ್ಯೆ ದಂತ ಚಿಕಿತ್ಸಾ ಶಿಬಿರ ಉದ್ಘಾಟಿಸಿದರು.

■ **ವಿಕ ಸುದ್ದಿಲೋಕ** ನೆಲ್ಯಾಡಿ

ಸಂಪ್ಯಾಡಿ ಸೈಂಟ್ ಮೇರೀಸ್ ಓರ್ಥೋಡೋಕ್ಸ್ ಚರ್ಚ್ ಓಸಿವೈಎಂ ಹಾಗೂ ಎಂ.ಜಿ.ಒ.ಸಿ.ಎಸ್.ಎಂ ಸಂಘಟನೆ, ಸೀನಿಯರ್ ಚೇಂಬರ್ ಇಂಟರ್‌ನ್ಯಾಷನಲ್ ನೆಲ್ಯಾಡಿ ಲೀಜಿಯನ್ ಮತ್ತು ಮಂಗಳೂರು ಮಣಿಪಾಲ್ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್ ಸಹಭಾಗಿತ್ವದಲ್ಲಿ ಭಾನುವಾರ ನಡೆದ ಉಚಿತ ದಂತ ಚಿಕಿತ್ಸಾ ಶಿಬಿರದಲ್ಲಿ 70ಕ್ಕೂ ಹೆಚ್ಚು ಜನರು ಪ್ರಯೋಜನ ಪಡೆದರು.

ಶಿರಾಡಿ ಗ್ರಾಮ ಪಂಚಾಯಿತಿ ಸದಸ್ಯೆ ರಾಧ ಉದ್ಘಾಟಿಸಿ ಶುಭ ಹಾರೈಸಿದರು. ಅಧ್ಯಕ್ಷತೆ ವಹಿಸಿದ್ದ ಫಾ.ಪಿ.ಸಿ.ಜೋಸ್, ಈ ದೇವಾಲಯವು ಸದಾ ಸಮಾಜ ಸೇವೆಯಲ್ಲಿ ಮುಂಚೂಣಿಯಲ್ಲಿದ್ದು, ಜಾತಿ- ಧರ್ಮ ಭೇದವಿಲ್ಲದೆ ಎಲ್ಲರಿಗೂ ಸಹಾಯ ಹಸ್ತ ಚಾಚುವ ಕಾರ್ಯದಲ್ಲಿ ತೊಡಗಿದೆ ಎಂದರು.

ಸೀನಿಯರ್ ಚೇಂಬರ್ ಇಂಟರ್ ನ್ಯಾಷನಲ್ ನೆಲ್ಯಾಡಿ ಲೀಜಿಯನ್ ಅಧ್ಯಕ್ಷ ಪ್ರಕಾಶ್ ಕೆ.ವೈ. ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ದಂತ ಆರೋಗ್ಯದ ಬಗ್ಗೆ ಜಾಗೃತಿ ಆಗಬೇಕಿದೆ. ಜನರು ಸಾಮಾನ್ಯವಾಗಿ ದಂತ ನೋವು ಹೆಚ್ಚಾದಾಗ ಮಾತ್ರ ವೈದ್ಯರನ್ನು ಸಂಪರ್ಕಿಸುವ ಪ್ರವೃತ್ತಿ ಹೊಂದಿದ್ದಾರೆ. ಈ ಶಿಬಿರದ ಮೂಲಕ ನಾವು ಜನರಲ್ಲಿ ಜಾಗೃತಿ ಮೂಡಿಸುವುದು ಮತ್ತು ತಕ್ಷಣ ಚಿಕಿತ್ಸೆ ನೀಡುವುದು ಎಂಬ ಎರಡು ಗುರಿಗಳನ್ನು ಸಾಧಿಸಿದ್ದೇವೆ ಎಂದು ಹೇಳಿದರು.

ಮಂಗಳೂರು ಮಣಿಪಾಲ್ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್‌ನ ಡೆಂಟಲ್ ಪ್ರೊಫೆಸರ್ ಡಾ.ನವ್ಯ ಮಾತನಾಡಿ, ದಂತ ಆರೋಗ್ಯವು ಒಬ್ಬರ ಒಟ್ಟು ಆರೋಗ್ಯದ ಮೂಲ. ಬಾಯಿಯಲ್ಲಿನ ಸೋಂಕುಗಳು ಹೃದಯ, ಮಧುಮೇಹ ಸೇರಿದಂತೆ ಅನೇಕ ಶಾರೀರಿಕ ಸಮಸ್ಯೆಗಳಿಗೆ ಕಾರಣವಾಗಬಹುದು. ಪ್ರತಿಯೊಬ್ಬರೂ 6 ತಿಂಗಳಿಗೊಮ್ಮೆ ದಂತ ತಪಾಸಣೆ ಮಾಡಿಸಿಕೊಳ್ಳುವುದು ಅತ್ಯಂತ ಅಗತ್ಯ ಎಂದರು.

ಶಿಬಾಜೆ ಮಾರ್ ಇಗ್ನಾತ್ತಿಯೋಸ್ ಚರ್ಚ್ ಧರ್ಮಗುರು ಫಾ. ಜೋನ್ ಮ್ಯಾಥ್ಯು ಕೋರ್ ಎಪಿಸ್ಕೋಪ, ಓರಲ್ ಸರ್ಜನ್ ಡಾ. ಜೆಫರ್ ಸನ್ ಉಪಸ್ಥಿತರಿದ್ದರು. ಜಾರ್ಜ್ ಟಿ.ಎಸ್. ಸ್ವಾಗತಿಸಿದರು. ಸಚಿನ್ ಕಾರ್ಯಕ್ರಮ ನಿರೂಪಿಸಿದರು. ವರ್ಗೀಸ್ ವಂದಿಸಿದರು.

Main Edition







ಸೈಂಟ್ ಮೇರೀಸ್ ಓರ್ಥೋಡೋಕ್ಸ್ ಸಿರಿಯನ್ ಚರ್ಚ್ ಸಂಪ್ಯಾಡಿ,
OCYM ಹಾಗೂ MGOCSM
ಸೀನಿಯರ್ ಚೇಂಬರ್ ಇಂಟರ್ ನ್ಯಾಷನಲ್ ನೆಲ್ಯಾಡಿ ಲೀಜಿಯನ್
ಸಹಭಾಗಿತ್ವದಲ್ಲಿ
ಮಣಿಪಾಲ್ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್ ಮಂಗಳೂರು
ಇವರ ಸಹಯೋಗದಲ್ಲಿ
ಉಚಿತ ದಂತ ಚಿಕಿತ್ಸಾ ಶಿಬಿರ
ದಂತ ಕುಳಿ ತುಂಬುವಿಕೆ, ಹಲ್ಲಿನ ಸ್ವಚ್ಛತೆ, ಹಲ್ಲು ಕೀಳುವಿಕೆ,
ಕೃತಕ ದಂತ ಜೋಡಣೆ ಇತ್ಯಾದಿ ಚಿಕಿತ್ಸೆಗಳು ಲಭ್ಯವಿರುತ್ತದೆ.
ದಿನಾಂಕ 23-11-2025 ಆದಿತ್ಯವಾರ ಸಮಯ : ಬೆಳಗ್ಗೆ 10.00ರಿಂದ 1.30ರ ವರೆಗೆ
ಸ್ಥಳ : ಸೈಂಟ್ ಮೇರೀಸ್ ಓರ್ಥೋಡೋಕ್ಸ್ ಸಿರಿಯನ್ ಚರ್ಚ್ ಸಂಪ್ಯಾಡಿ
ಉದ್ಘಾಟನೆ ಸಮಯ : ಬೆಳಗ್ಗೆ 10.00 ಗಂಟೆ
ಅಧ್ಯಕ್ಷತೆ : ರೆ। ಫಾ। ಜೋಸ್ ಚೆಮ್ಮನಂ ವಿಕಾರ್, ಸೈಂಟ್ ಮೇರೀಸ್ ಓರ್ಥೋಡೋಕ್ಸ್ ಸಿರಿಯನ್ ಚರ್ಚ್ ಸಂಪ್ಯಾಡಿ
ಮುಖ್ಯ ಅತಿಥಿ : ಡಾ ಜೆಫರ್‌ಸನ್ ಓರಲ್ ಸರ್ಜನ್
ಡಾ. ನವ್ಯಾ ಡೆಂಟಲ್ ಪ್ರೊಫೆಸರ್
Snr PPF ಪ್ರಕಾಶ್ ಕೆ.ವೈ. ಅಧ್ಯಕ್ಷರು, ಸೀನಿಯರ್ ಚೇಂಬರ್ ಇಂಟರ್ ನ್ಯಾಷನಲ್ ನೆಲ್ಯಾಡಿ ಲೀಜಿಯನ್
ಸಾರ್ವಜನಿಕರು ಈ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.
ಅಧ್ಯಕ್ಷರು/ಕಾರ್ಯದರ್ಶಿ OCYM
ಅಧ್ಯಕ್ಷರು/ಕಾರ್ಯದರ್ಶಿ MGOCSM
ಅಧ್ಯಕ್ಷರು/ಕಾರ್ಯದರ್ಶಿ ಸರ್ವಸದಸ್ಯರು ಸೀನಿಯರ್ ಚೇಂಬರ್ ಇಂಟರ್ ನ್ಯಾಷನಲ್ ನೆಲ್ಯಾಡಿ ಲೀಜಿಯನ್
ವಿಕಾರ್, ಟ್ರಸ್ಟಿ, ಸೆಕ್ರೆಟರಿ ಹಾಗೂ ಆಡಳಿತ ಮಂಡಳಿ




ಸೈಂಟ್ ಮೇರೀಸ್ ಓರ್ಥೋಡೋಕ್ಸ್ ಸಿರಿಯನ್ ಚರ್ಚ್ ಸಂಪ್ಯಾಡಿ,
OCYM ಹಾಗೂ MGOCSM
ಸೀನಿಯರ್ ಚೇಂಬರ್ ಇಂಟರ್ ನ್ಯಾಷನಲ್ ನೆಲ್ಯಾಡಿ ಲೀಜಿಯನ್
ಸಹಭಾಗಿತ್ವದಲ್ಲಿ
ಮಣಿಪಾಲ್ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್ ಮಂಗಳೂರು
ಇವರ ಸಹಯೋಗದಲ್ಲಿ
ಉಚಿತ ದಂತ ಚಿಕಿತ್ಸಾ ಶಿಬಿರ
ದಿನಾಂಕ 23-11-2025 ಆದಿತ್ಯವಾರ | ಸಮಯ : ಬೆಳಗ್ಗೆ 10.00ರಿಂದ 1.30ರ ವರೆಗೆ
ಸ್ಥಳ : ಸೈಂಟ್ ಮೇರೀಸ್ ಓರ್ಥೋಡೋಕ್ಸ್ ಸಿರಿಯನ್ ಚರ್ಚ್ ಸಂಪ್ಯಾಡಿ
ದಂತ ಕುಳಿ ತುಂಬುವಿಕೆ, ಹಲ್ಲಿನ ಸ್ವಚ್ಛತೆ, ಹಲ್ಲು ಕೀಳುವಿಕೆ,
ಕೃತಕ ದಂತ ಜೋಡಣೆ ಇತ್ಯಾದಿ ಚಿಕಿತ್ಸೆಗಳು ಲಭ್ಯವಿರುತ್ತದೆ.
ಸರ್ವರಿಗೂ ಆದರದ ಸ್ವಾಗತ